**ದಿನಾಂಕ 25.11.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಅರ್ಜಿದಾರರ ಪರ: ಶ್ರೀ. ಬಿ.ಆರ್. ವಕೀಲರಿಂದಃ–**

ನಾನು ಹಾಜರುಪಡಿಸಿರುವ ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ನಾನು ನಿರುದ್ಯೋಗಿ ಎಂದು ತೋರಿಸಿರುತ್ತೇನೆ. ಕೇಂದ್ರ ಸರ್ಕಾರದಿಂದ ನರೇಗ ಯೋಜನಡಿ ವಿದ್ಯಾವಂತರು ಅಥವಾ ಕೂಲಿ ಕಾರ್ಮಿಕರು ಅದರಲ್ಲಿ ನೊಂದಾವಣೆ ಮಾಡಿಕೊಂಡರೆ ಅವರಿಗೆ ಕೆಲಸವನ್ನು ಕೊಡಿಸಲಾಗುತ್ತದೆ ಎಂದರೆ, ಸಾಕ್ಷಿಯು ನಾನು ಅದಕ್ಕೆ ನೊಂದಣಿ ಮಾಡಿಕೊಂಡಿರುವುದಿಲ್ಲ, ನಾನು ಡಿಪ್ರೆಶನ್ ಗೆ ಹೋಗಿದ್ದು ಅದಕ್ಕೆ ಚಿಕಿತ್ಸೆಯನ್ನು ಪಡೆಯುತ್ತಿದ್ದೆ ಎಂದು ನುಡಿಯುತ್ತಾರೆ. ಸಾಕ್ಷಿಯು ಯಾವ ಕಾರಣಕ್ಕೆ ನಾನು ಡಿಪ್ರೆಶನ್ ಗೆ ಹೋಗಿರುತ್ತೇನೆ ಎಂದರೆ ನನ್ನ ಹೆಂಡತಿಯು ನನ್ನನ್ನು ಬಿಟ್ಟು ಹೋಗಿದ್ದರಿಂದ ಮಾನಸಿಕವಾಗಿ ನನಗೆ ಹಿಂಸೆಯಾಗುತ್ತಿರುತ್ತದೆ ಎಂದು ನಾನು ಚಿಕಿತ್ಸೆಯನ್ನು ಪಡೆಯುತ್ತಿದ್ದೇನೆ ಎಂದು ನುಡಿಯುತ್ತಾರೆ. ನಾನು ಈಗಾಗಲೇ ಕೆಲಸವನ್ನು ನಿರ್ವಹಿಸುತ್ತಿರುವುದರಿಂದ ನರೇಗ ಯೋಜನಡಿಯಲ್ಲಿ ನನ್ನ ಹೆಸರನ್ನು ನೊಂದಾಯಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಉದ್ದೇಶಪೂರ್ವಕವಾಗಿಯೇ ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ನಾನು ನಿರುದ್ಯೋಗಿ ಎಂದು ತೋರಿಸಿರುತ್ತೇನೆ ಎಂದರೆ ಸರಿಯಲ್ಲ.

ನಿಆರ್.12 ಮತ್ತು 13ರ ದಾಖಲೆಗಳ ಪ್ರಕಾರ ನನಗೆ ಚಿಕಿತ್ಸೆ ನೀಡಿದವರು ಡಾ.ಮಹೇಶ್ ರವರು ಆಗಿರುತ್ತಾರೆ. ಆದರೆ ಅವರ ಹೆಸರು ಮತ್ತು ಸೀಲು ಸದರಿ ದಾಖಲೆಗಳಲ್ಲಿ ನಮೂದಾಗಿರುವುದಿಲ್ಲ. ಆದರೆ ಅವರು ಸಹಿಯನ್ನು ಹಾಕಿರುತ್ತಾರೆ ಎಂದು ನುಡಿಯುತ್ತಾರೆ. ಯಾವುದೇ ಆಸ್ಪತ್ರೆಯಲ್ಲಿ ಸರ್ಟಿಫಿಕೇಟನ್ನು ಈಗ ಗಣಕಯಂತ್ರದ ಮೂಲಕ ನೀಡುತ್ತಾರೆಯೇ ವಿನಃ ಕೈಯಲ್ಲಿ ಬರೆದು ನೀಡುವುದಿಲ್ಲ ಎಂದರೆ ಸರಿಯಲ್ಲ.

ನಿಆರ್.13ರ ದಾಖಲೆಯು ಪ್ರಿಸ್ಕ್ರಿಪ್ಷನ್ ಆಗಿರುತ್ತದೆ ಎಂದರೆ ಸರಿ. ಸದರಿ ದಾಖಲೆಯಲ್ಲಿ ಎರಡು ಮಾತ್ರೆಗಳಿಗೆ ಸಂಬಂಧಿಸಿದಂತೆ ಬರೆದಿರುತ್ತಾರೆಯೇ ವಿನಃ ಮುಂದೆ ಸದರಿ ವೈದ್ಯರಿಗೆ ತೋರಿಸಿದ ಬಗ್ಗೆಯಾಗಲಿ, ದಾಖಲೆಗಳಾಗಲಿ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ದಾಖಲೆಗಳು ನನ್ನ ಬಳಿ ಇರುತ್ತವೆ ಎಂದು ನುಡಿಯುತ್ತಾರೆ.

ನಿಆರ್.14ರ ದಾಖಲೆಯು ನನ್ನ ಮೊಣಕಾಲಿನ ನೋವಿಗೆ ಸಂಬಂಧಿಸಿದಂತೆ ಚಿಕಿತ್ಸೆ ಪಡೆದ ದಾಖಲೆಯಾಗಿರುತ್ತದೆ. ಸದರಿ ದಾಖಲೆಯಲ್ಲಿ ನನಗೆ ಚಿಕಿತ್ಸೆ ನೀಡಿದ ಬಗ್ಗೆ ಯಾವುದೇ ನಮೂದು ಇರುವುದಿಲ್ಲ ಎಂದರೆ ಸರಿಯಲ್ಲ. ನಿಆರ್.12 ರಿಂದ 14ರ ದಾಖಲೆಗಳನ್ನು ಯಾವ ವೈದ್ಯರು ನನಗೆ ನೀಡಿರುವುದಿಲ್ಲ, ನಾನೇ ಅದನ್ನು ಸೃಷ್ಠಿಸಿ ಈ ಪ್ರಕರಣಕ್ಕೆ ತಂದು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

ನಿಆರ್.1ರ ದಾಖಲೆಯು 1ನೇ ಅರ್ಜಿದಾರರಿಗೆ ಸಂಬಂಧಿಸಿದ ದಾಖಲೆಯಾಗಿದ್ದು, ಅವರ ಬಳಿ ಸಾಕಷ್ಟು ಹಣ ಇದೆ ಎಂದು ತೋರಿಸಲು ಸದರಿ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ನಾನು ಹಾಜರುಪಡಿಸಿರುವ ನಿಆರ್.1ರ ದಾಖಲೆಯ ಸಂದರ್ಭದಲ್ಲಿ ನಾನು 1ನೇ ಅರ್ಜಿದಾರರ ಖಾತೆಗೆ ಯಾವುದೇ ಹಣವನ್ನು ಹಾಕಿರುವುದಿಲ್ಲ. ನಿಆರ್.1ರ ದಾಖಲೆಯು 1ನೇ ಅರ್ಜಿದಾರರ ಸಣ್ಣ–ಪುಟ್ಟ ಹಣಕಾಸಿಗೆ ಸಂಬಂಧಿಸಿದಂತೆ ಸೇವಿಂಗ್ಸ್ ಅಕೌಂಟ್ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಿಆರ್.1ರ ದಾಖಲೆಯಲ್ಲಿ ರೂ.40,000/– ಕ್ಕಿಂತ ಹೆಚ್ಚಿನ ಹಣ ಇಲ್ಲದಿರುವ ಬಗ್ಗೆ ನಮೂದು ಇರುತ್ತದೆ ಎಂದರೆ ಸರಿಯಲ್ಲ. ನಿಆರ್.1ರ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸುವ ಪೂರ್ವದಲ್ಲಿ ನಾನು ಅದನ್ನು ಪರಿಶೀಲಿಸಿ ನೋಡಿಯೇ ಹಾಜರುಪಡಿಸಿರುತ್ತೇನೆ. ನಾನು ಸದರಿ ದಾಖಲೆಯಲ್ಲಿ ರೂ.10,000/– ಕ್ಕಿಂತ ಹೆಚ್ಚು ಹಣವನ್ನು ಹಾಕಿಕೊಳ್ಳುವುದು ಅಥವಾ ತೆಗೆದುಕೊಳ್ಳುವುದು 1ನೇ ಅರ್ಜಿದಾರರು ಮಾಡಿರುವ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸರಿಯಲ್ಲ.

ನಿಆರ್.1ರ ದಾಖಲೆಯಲ್ಲಿ ನಾನು ಬ್ಯಾಂಕಿನಲ್ಲಿ ತೆಗೆದುಕೊಂಡಿರುತ್ತೇನೆ. ನಿಆರ್.1ರ ದಾಖಲೆಯನ್ನು ನಾನು ಬ್ಯಾಂಕಿನಲ್ಲಿ ಹೇಗೆ ತೆಗೆದುಕೊಂಡಿರುತ್ತೇನೆ ಎಂದು ನನಗೆ ಮಾಹಿತಿ ಇರುವುದಿಲ್ಲ. ನಿಆರ್.1ರ ದಾಖಲೆಯನ್ನು ನಾನು ಮಾಹಿತಿಹಕ್ಕಿನಡಿಯಲ್ಲಾಗಲಿ ಅಥವಾ ವೈಯುಕ್ತಿಕವಾಗಿ ಬ್ಯಾಂಕಿಗೆ ಅರ್ಜಿ ನೀಡಿ ಪಡೆದ ಬಗ್ಗೆಯಾಗಲಿ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನಿಆರ್.1ರ ದಾಖಲೆಯನ್ನು ನಾನು ಹೇಗೆ ಪಡೆದುಕೊಂಡಿರುತ್ತೇನೆ ಎಂದು ನನಗೆ ಈಗ ಮಾಹಿತಿ ಇರುವುದಿಲ್ಲ. ನಿಆರ್.1ರ ದಾಖಲೆಯು 1ನೇ ಅರ್ಜಿದಾರರಿಗೆ ಸಂಬಂಧಿಸಿದ ದಾಖಲೆಯಾಗಿರುವುದಿಲ್ಲ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಯಾರಾದರು ವ್ಯಕ್ತಿಗಳ

ಬ್ಯಾಂಕಿನ ಖಾತೆಗೆ ಸಂಬಂಧಿಸಿದ ವ್ಯವಹರಣೆಗೆ ಸಂಬಂಧಿಸಿದಂತೆ ದಾಖಲೆಯನ್ನು ಪಡೆಯುವಾಗ ಸಂಬಂಧಪಟ್ಟ ಬ್ಯಾಂಕಿಗೆ ಅರ್ಜಿಯನ್ನು ನೀಡಿ ಪಡೆದುಕೊಳ್ಳಬೇಕಾಗುತ್ತದೆ ಎಂದರೆ ನನಗೆ ಗೊತ್ತಿಲ್ಲ. ಆ ವ್ಯಕ್ತಿಗಳ ವೈಯುಕ್ತಿಕ ಮಾಹಿತಿಯನ್ನು ಸಂಬಂಧಪಟ್ಟ ಬ್ಯಾಂಕಿನವರು ಅರ್ಜಿಯನ್ನು ನೀಡದೆ ಕೊಡಲು ಬರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಆರ್.1ರ ದಾಖಲೆಯನ್ನು ನಾನು ಸೃಷ್ಠಿಸಿ ತಂದು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

ನಿಆರ್.3ರ ದಾಖಲೆಯು ಒಡವೆ ಖರೀದಿಸಿದ ಬಗ್ಗೆ ನೀಡಿದ ರಶೀದಿಯಾಗಿದ್ದು, ಸದರಿ ರಶೀದಿಯ ಪ್ರಕಾರ ನಾನು ಚಿನ್ನದ ಸರವನ್ನು 2023ರಲ್ಲಿ ಖರೀದಿಸಿರುತ್ತೇನೆ. 1ನೇ ಅರ್ಜಿದಾರರ ಮನೆಯವರು ವಿವಾಹದ ಸಮಯದಲ್ಲಿ ನೀಡಿದ ಚಿನ್ನದ ಸರವನ್ನು ನಾನು ಬ್ಯಾಂಕಿನಲ್ಲಿ ಅಡವಿಟ್ಟು ಕಳೆದುಕೊಂಡು ಪುನಃ ತೋರಿಕೆಗಾಗಿ 2023ರಲ್ಲಿ ನಾನು ಚಿನ್ನದ ಸರವನ್ನು ಖರೀದಿಸಿರುತ್ತೇನೆ ಎಂದರೆ ಸರಿಯಲ್ಲ. ನಿಆರ್.4ರ ದಾಖಲೆಯು ನಾನು ಬ್ಯಾಂಕಿನಲ್ಲಿ ಒಡವೆಗಳನ್ನು ಅಡವಿಟ್ಟ ಬಗ್ಗೆ ದಾಖಲೆಯಾಗಿದ್ದು, ವೈಭವ್ ಮಾರ್ಟನ್ನು ತೆರೆಯಲು ನಾನು ಒಡವೆಗಳನ್ನು ಅಡವಿಟ್ಟಿರುತ್ತೇನೆ. ನಿಆರ್.4ರ ದಾಖಲೆಯಲ್ಲಿ 1ನೇ ಅರ್ಜಿದಾರರು ಅವರ ಖಾತೆಯಲ್ಲಿ ಒಡವೆಗಳನ್ನು ಅಡವಿಟ್ಟ ಬಗ್ಗೆ ದಾಖಲೆಯಾಗಿರುತ್ತದೆ ಎಂದರೆ ಸರಿ. ಸದರಿ ದಾಖಲೆಯಲ್ಲಿ ನನ್ನ ಹೆಸರು ಇರುವುದಿಲ್ಲ ಎಂದರೆ ಸರಿ. ನಿಆರ್.4ರ ದಾಖಲೆಯಂತೆ ಅಡವಿಟ್ಟ ಒಡವೆಗಳು 1ನೇ ಅರ್ಜಿದಾರರಿಗೆ ಸಂಬಂಧಿಸಿದ ದಾಖಲೆಯಾಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಒಡವೆಗಳಾಗಿದ್ದರೆ ನನ್ನ ಖಾತೆಗೆ ಒಡವೆಗಳನ್ನು ಅಡವಿಟ್ಟುಕೊಳ್ಳುತ್ತಿದ್ದೆ, 1ನೇ ಅರ್ಜಿದಾರರ ಒಡವೆಗಳಾಗಿರುವುದರಿಂದ ಅವರ ಹೆಸರಿನಲ್ಲಿ ಅಡವಿಟ್ಟುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿಆರ್.4ರ ದಾಖಲೆಯಲ್ಲಿ ಅಡವಿಟ್ಟ ಒಡವೆಗಳನ್ನು ಬಿಡಿಸಿಕೊಳ್ಳಲಾಗಿರುತ್ತದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ನಿಆರ್.4ರ ದಾಖಲೆಯು ನನ್ನ ಬಳಿ ಹೇಗೆ ಬಂತು ಎಂಬ ಪ್ರಶ್ನೆಗೆ ಸಾಕ್ಷಿಯು ಅಡವಿಡಲು ಬ್ಯಾಂಕಿಗೆ ಹೋದಾಗ ಇಬ್ಬರು ಒಟ್ಟಿಗೆ ಹೋಗಿದ್ದರಿಂದ ಸದರಿ ದಾಖಲೆಯನ್ನು ನಾನು ಪಡೆದುಕೊಂಡು ಇಟ್ಟುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. 1ನೇ ಅರ್ಜಿದಾರರಿಗೆ ಸೇರಿದ ಒಡವೆಗಳನ್ನು 1ನೇ ಅರ್ಜಿದಾರರಿಗೆ ಹೆದರಿಸಿ ಬ್ಯಾಂಕಿನಲ್ಲಿ ಅಡಮಾನವಿರಿಸಿ ಅದರಿಂದ ದೊರೆತ ಹಣವನ್ನು ನಾನು ಪಡೆದುಕೊಂಡಿರುವುದರಿಂದ ಸದರಿ ಚೀಟಿಯನ್ನು

ನಾನು ಇಟ್ಟುಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ನಿಆರ್.5 ರ ದಾಖಲೆಯನ್ನು ನಾನು ಬೆಂಗಳೂರಿನಲ್ಲಿ ಬಾಡಿಗೆ ಮನೆ ಮಾಡಿಕೊಂಡಿದ್ದಾಗ ಪಡೆದ ಗ್ಯಾಸ್ ನ ಬಗ್ಗೆ ನಮೂದು ಇರುವ ದಾಖಲೆಯಾಗಿರುತ್ತದೆ. ಸದರಿ ದಾಖಲೆಯಲ್ಲಿ ಚೌಡಯ್ಯ ಬ್ಲಾಕ್ ನಲ್ಲಿ ವಾಸವಿದ್ದ ಬಗ್ಗೆ ನಮೂದು ಇರುವ ದಾಖಲೆಯಾಗಿರುತ್ತದೆ ಎಂದರೆ, ಸಾಕ್ಷಿಯು ಆರ್.ಟಿ.ನಗರದಲ್ಲಿ ಚೌಡಯ್ಯ ಬ್ಲಾಕ್ ಬರುತ್ತದೆ ಎಂದು ನುಡಿಯುತ್ತಾರೆ. ನಿಆರ್.5 ರ ದಾಖಲೆಯನ್ನು ದಿನಾಂಕ 23.09.2016 ರಲ್ಲಿ ನೀಡಿದ ದಾಖಲೆಯಾಗಿರುತ್ತದೆ.

ನಿಆರ್.6 ಆದಾಯ ದೃಢೀಕರಣ ಪ್ರಮಾಣಪತ್ರವಾಗಿದ್ದು ಸದರಿ ದಾಖಲೆಯನ್ನು ಏಕೆ ಹಾಜರುಪಡಿಸಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು 1 ನೇ ಅರ್ಜಿದಾರರ ಮನೆಯವರು ನಾವು ಒಂದೇ ಜಾತಿಯಾಗಿದ್ದರೂ ಸಹ ಅದರಲ್ಲಿ ಮೇಲು ಜಾತಿ ಮತ್ತು ಕೀಳು ಜಾತಿ ಎಂದು ಹೀಯಾಳಿಸುತ್ತಿದ್ದರು, ನಾವು ಒಂದೇ ಜಾತಿ ಎಂದು ತೋರಿಸಲು ಸದರಿ ದಾಖಲೆಯನ್ನು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಸದರಿ ಅಂಶಗಳನ್ನು ನನ್ನ ತಕರಾರಿನಲ್ಲಿ ನಮೂದಿಸಿರುತ್ತೇನೆ. ನಾನು ಸದರಿ ಅಂಶಗಳನ್ನು ನನ್ನ ತಕರಾರಿನಲ್ಲಿ ನಮೂದಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ನನ್ನ ಪ್ರಮಾಣಪತ್ರದಲ್ಲಿ ನಮೂದಿಸಿರುತ್ತೇನೆ ಎಂದು ನುಡಿಯುತ್ತಾರೆ. 1 ನೇ ಅರ್ಜಿದಾರರು ಒಂದು ವೇಳೆ ಜಾತಿ ಮತ್ತು ಆದಾಯ ಪ್ರಮಾಣಪತ್ರವನ್ನು ಪಡೆಯಲು ಅರ್ಜಿಯನ್ನು ಸಲ್ಲಿಸಿದರೆ ಅವರಿಗೂ ಸಹ ನಿಆರ್.6 ರಂತೆ ದಾಖಲೆಯನ್ನು ನೀಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಆರ್.6 ರ ದಾಖಲೆಯಲ್ಲಿ ವೀರಶೈವ ಲಿಂಗಾಯತ ಎಂದು ಜಾತಿ ಕಾಲಂ ನಲ್ಲಿ ನಮೂದಿಸಿದ್ದು, 1 ನೇ ಅರ್ಜಿದಾರರು ಅರ್ಜಿ ನೀಡಿದರೂ ಸಹ ಜಾತಿ ಕಾಲಂ ನಲ್ಲಿ ವೀರಶ್ವೆವ ಲಿಂಗಾಯತ ಎಂದೇ ನಮೂದಿಸಿಕೊಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ನಿಆರ್.7 ರ ದಾಖಲೆಯು ಇ.ಎಂ.ಐ ಪಾವತಿಸಲು ಸಾಧ್ಯವಾಗದೆ ನನ್ನ ಕಾರನ್ನು ಬೇರೆಯವರಿಗೆ ಮಾರಾಟ ಮಾಡಿದ್ದು, ಅವರ ಹೆಸರಿಗೆ ವರ್ಗಾವಣೆಗೊಂಡ ಬಗ್ಗೆ ಇರುವ ದಾಖಲೆಯಾಗಿರುತ್ತದೆ. 2023 ರಲ್ಲಿ ನಾನು ಕಾರನ್ನು ಖರೀದಿಸಿರುತ್ತೇನೆ. ನಾನು ಕಾರನ್ನು ಖರೀದಿಸುವಾಗ ಸುಮಾರು 6 ಲಕ್ಷ ಹಣವನ್ನು ಮುಂಗಡವಾಗಿ ನೀಡಿದ್ದು, ಉಳಿದ ಹಣವನ್ನು ಬ್ಯಾಂಕ್ ಆಫ್ ಬರೋಡದಿಂದ ಸಾಲವನ್ನು ಪಡೆದಿರುತ್ತೇನೆ. ಬ್ಯಾಂಕ್ ಆಫ್ ಬರೋಡದಿಂದ

ಕಾರನ್ನು ಖರೀದಿಸಲು ನನಗೆ 11 ಲಕ್ಷ ಸಾಲ ಮಂಜೂರಾಗಿತ್ತು, ಅದರಲ್ಲಿ 6 ಲಕ್ಷ ಹಣವನ್ನು ಕಾರು ಶೋರೂಮ್ ರವರಿಗೆ ಡೌನ್‌ಪೇಮೆಂಟ್ ಮಾಡಿದ್ದು, ಉಳಿದ ಹಣವನ್ನು ಸಾರಿಗೆ ತೆರಿಗೆ (Tax) ಗೆ ಪಾವತಿ ಮಾಡಿರುತ್ತೇನೆ. ನಾನು ಪ್ರತಿ ತಿಂಗಳು ಕಾರಿಗೆ ಸಂಬಂಧಿಸಿದಂತೆ ರೂ.17,000/- ಹಣವನ್ನು ಇ.ಎಂ.ಐ. ಅನ್ನು ಪಾವತಿಸುತ್ತಿದ್ದೆ. ಸುಮಾರು 03 ತಿಂಗಳು ಇ.ಎಂ.ಐ.ಯನ್ನು ಪಾವತಿಸಿದ್ದೆ.

ನಿಆರ್.6 ನ್ನು ನನಗೆ ನೀಡುವ ಪೂರ್ವದಲ್ಲಿ ನನ್ನ ಬಳಿ ಕಾರು ಇತ್ತು ಎಂದರೆ ಸರಿಯಲ್ಲ. ನಿಆರ್.1 ರಲ್ಲಿ ಪ್ರತಿ ತಿಂಗಳು ಅಥವಾ ಮೂರು ತಿಂಗಳಿಗೊಮ್ಮೆ ಅಥವಾ ವಾರ್ಷಿಕವಾಗಿಯಾಗಲಿ ನಿಶ್ಚಿತವಾದ ಹಣ ಸದರಿ ಖಾತೆಯಲ್ಲಿ ಜಮೆಯಾಗಿರುವ ಬಗ್ಗೆ ನಮೂದಾಗಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ.

ನಿಆರ್.7 ರಲ್ಲಿ ನಮೂದಿರುವಂತೆ ನಾನು ಖರೀದಿಸಿರುವ ಮಾರುತಿ ಸುಜುಕಿ ಗ್ರ್ಯಾಂಡ್ ವಿಟಾರ ಕಾರಿನ ಬೆಲೆ ಒಟ್ಟು ರೂ.21 ಲಕ್ಷ ಆಗಿರುತ್ತದೆ ಎಂದರೆ ನನಗೆ ಮರೆತು ಹೋಗಿರುತ್ತದೆ. ನನಗೆ ನಿಶ್ಚಿತವಾದ ಆದಾಯ ಇದ್ದುದ್ದರಿಂದಲೇ ಹಾಗೂ ಸದರಿ ಕಾರನ್ನು ನಿರ್ವಹಣೆ ಮಾಡುವ ಶಕ್ತಿ ಇದ್ದುದ್ದರಿಂದಲೇ ನಾನು ರೂ.21 ಲಕ್ಷದ ಕಾರನ್ನು ಖರೀದಿಸಿರುತ್ತೇನೆ ಎಂದರೆ ಸರಿಯಲ್ಲ. 2023 ರಲ್ಲಿ ನಾನು ಕಾರನ್ನು ಖರೀದಿಸಿರುವ ಬಗ್ಗೆ ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದರ ಸದರಿ ದಾಖಲೆಗಳು ನನ್ನ ಬಳಿ ಇರುತ್ತವೆ ಎಂದು ನುಡಿಯುತ್ತಾರೆ. ನಾನು 2022 ರಲ್ಲಿ ಸದರಿ ಕಾರನ್ನು ಖರೀದಿಸಿದ್ದು ಉದ್ದೇಶಪೂರ್ವಕವಾಗಿಯೇ ಕಾರಿಗೆ ಸಂಬಂಧಿಸಿದ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ಅರ್ಜಿದಾರರುಗಳ ಜೀವನಕ್ಕೆ ಇದುವರೆಗು ನಾನು ಯಾವುದೇ ಜೀವನ ನಿರ್ವಹಣಾ ವ್ಯವಸ್ಥೆಯನ್ನು ಮಾಡಿರುವುದಿಲ್ಲ ಎಂದರೆ, ಸಾಕ್ಷಿಯು ಅರ್ಜಿದಾರರು ನನ್ನ ಜೊತೆಯಲ್ಲಿ ಇದ್ದಾಗ ನಾನು ವ್ಯವಸ್ಥೆ ಮಾಡಿಕೊಟ್ಟಿರುತ್ತೇನೆ, ಈಗ ಮಾಡಿಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ.

ನಿಆರ್.9 ರ ದಾಖಲೆಯು ನಾನು ವೈಭವ್ ಮಾರ್ಟನ್ನು ತೆರೆದ ಬಗ್ಗೆ ನೀಡಿದ ರಿಜಿಸ್ಟ್ರೇಶನ್ ಸರ್ಟಿಫಿಕೇಟ್ ಆಗಿರುತ್ತದೆ ಎಂದರೆ ಸರಿ. ಕಡೂರಿನ 3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ 1 ನೇ ಅರ್ಜಿದಾರರು ಹಾಕಿದಂತಹ ಜೀವನಾಂಶ ಪ್ರಕರಣವನ್ನು

ಹಿಂಪಡೆದ ನಂತರ ವೈಭವ್ ಮಾರ್ಟನ್ನು ತೆರೆದಿರುತ್ತೇನೆ ಎಂದರೆ ಸರಿ. 1 ನೇ ಅರ್ಜಿದಾರರ ಪೋಷಕರು ಪ್ರಕರಣವನ್ನು ವಾಪಸ್ಸು ತೆಗೆದುಕೊಳ್ಳದಂತೆ ತಿಳಿಸಿದ್ದರು. ಆದರೆ ನಾನು 1 ನೇ ಅರ್ಜಿದಾರರಿಗೆ ತಿಳುವಳಿಕೆ ಹೇಳಿ ಮಗನ ಜೀವನ ಹಾಳು ಮಾಡಬಾರದು ಎಂದು ಮಾತನಾಡಿಕೊಂಡು ಸದರಿ ಪ್ರಕರಣವನ್ನು ಹಿಂಪಡೆಯುವಂತೆ ತಿಳಿಸಿ ಕರೆದುಕೊಂಡು ಹೋಗಿರುತ್ತೇನೆ. 1 ನೇ ಅರ್ಜಿದಾರರು ಜೀವನಾಂಶ ಪ್ರಕರಣವನ್ನು ಹಿಂಪಡೆದ ನಂತರ ನನ್ನೊಂದಿಗೆ ಬರುವಾಗ ಮನೆಯಿಂದ ಅವರಿಗೆ ಸಂಬಂಧಿಸಿದ ಒಡವೆಗಳನ್ನು ತಂದಿದ್ದು ಅದನ್ನು ಅಡಮಾನವಿಟ್ಟು ವೈಭವ್ ಮಾರ್ಟನ್ನು ತೆರೆದಿರುತ್ತೇನೆ ಎಂದರೆ ಸರಿಯಲ್ಲ.

1 ನೇ ಅರ್ಜಿದಾರರಿಗೆ ಸಂಬಂಧಿಸಿದ ಒಡವೆಗಳನ್ನು ಅಡವಿಡುವಂತೆ ಹೆದರಿಸಿ ನನ್ನ ಬ್ಯಾಂಕ್ ಖಾತೆಗೆ ಅಡವಿಟ್ಟುಕೊಂಡು ವೈಭವ್ ಮಾರ್ಟನ್ನು ತೆರೆದಿರುತ್ತೇನೆ ಎಂದರೆ ಸರಿಯಲ್ಲ. 1 ನೇ ಅರ್ಜಿದಾರರಿಗೆ ನಾನು ತದನಂತರ ನನ್ನ ತಂದೆ–ತಾಯಿಯ ಚಿತಾವಣೆಗೆ ಮೇರೆಗೆ ಹಿಂಸೆಯನ್ನು ನೀಡುತ್ತಿದ್ದುದ್ದರಿಂದ 1 ನೇ ಅರ್ಜಿದಾರರು ನನ್ನೊಂದಿಗೆ ಜೀವನವನ್ನು ನಿರ್ವಹಿಸಲು ಸಾಧ್ಯವಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು 1 ನೇ ಅರ್ಜಿದಾರರು ಬೆಂಗಳೂರಿನಲ್ಲಿ ಇರುವ ಸಂದರ್ಭದಲ್ಲಿ ನನ್ನ ತಂದೆ–ತಾಯಿ, ನನ್ನ ಸಹೋದರ ಬೆಂಗಳೂರಿಗೆ ಬಂದು ಹೋಗುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ–ತಾಯಿ ಮತ್ತು ನನ್ನ ಸಹೋದರನ ಚಿತಾವಣೆ ಮೇರೆಗೆ ನಾನು 1 ನೇ ಅರ್ಜಿದಾರರಿಗೆ ಹೊಡೆದು 1 ನೇ ಅರ್ಜಿದಾರರನ್ನು ಮತ್ತು 2 ನೇ ಅರ್ಜಿದಾರರನ್ನು ಮನೆಯಿಂದ ಹೊರಗೆ ಹಾಕಿದ್ದು ರಾತ್ರಿ ಪೂರಾ ಮನೆಯ ಜಗುಲಿ ಮೇಲೆ ಇದ್ದು ಬೆಳಗ್ಗೆ ಹೋಗಿ ನನ್ನ ವಿರುದ್ಧ ಪೊಲೀಸ್ ಠಾಣೆಗೆ ದೂರನ್ನು ನೀಡಿರುತ್ತಾರೆ ಎಂದರೆ, ಸಾಕ್ಷಿಯು ದೂರನ್ನು ನೀಡಿದ್ದು, ತದನಂತರ ಅಲ್ಲಿ ಪೊಲೀಸರು ಇಬ್ಬರಿಗು ತಿಳುವಳಿಕೆ ಹೇಳಿ ಕಳುಹಿಸಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಹೆಂಡತಿ ಎಂಬುದನ್ನು ಪರಿಗಣಿಸದೆ ಒಂಟಿ ಹೆಂಗಸನ್ನು ಮಧ್ಯರಾತ್ರಿ ಮನೆಯಿಂದ ಹೊಡೆದು ಹೊರಗೆ ಹಾಕಿ ಅಮಾನುಷವಾಗಿ ವರ್ತಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಇನ್ನು ಮುಂದೆ ಅರ್ಜಿದಾರರುಗಳಿಗೆ ತೊಂದರೆ ಕೊಡುವುದಿಲ್ಲವೆಂದು ಸಹ ಈ ಬಗ್ಗೆ ಬೆಂಗಳೂರು ಪೊಲೀಸ್ ಠಾಣೆಗೆ ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

ನಿಆರ್.17, 18 ಮತ್ತು 23 ರ ಛಾಯಾಚಿತ್ರಗಳಿಂದ ನಾನು ಅರ್ಜಿದಾರರೊಂದಿಗೆ ಎಷ್ಟು ಕ್ರೂರವಾಗಿ ನಡೆದುಕೊಂಡಿದ್ದೆ ಎಂದು ತೋರಿಸುತ್ತದೆ ಎಂದರೆ ಸರಿಯಲ್ಲ.

ನಿಆರ್.17 ಎ, 38 ರಿಂದ 46 ರ ಛಾಯಾಚಿತ್ರಗಳು 1 ನೇ ಅರ್ಜಿದಾರರಿಗೆ ಸಂಬಂಧಿಸಿದ್ದು 1 ನೇ ಅರ್ಜಿದಾರರ ಮೇಲೆ ನನಗೆ ಹೆಂಡತಿ ಎಂಬ ಗೌರವ ಭಾವನೆ ಇದ್ದಿದ್ದರೆ ಸದರಿ ಛಾಯಾಚಿತ್ರಗಳನ್ನು ನಾನು ತೆಗೆದುಕೊಂಡು 1 ನೇ ಅರ್ಜಿದಾರರಿಗೆ ಹೆದರಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ಸದರಿ ಛಾಯಾಚಿತ್ರಗಳಿಂದ ನನ್ನ ಕೀಳು ಅಭಿರುಚಿಯನ್ನು ಹಾಗೂ ನನ್ನ ಮಾನಸಿಕ ಸ್ಥಿಯ ಬಗ್ಗೆ ತಿಳಿಸುತ್ತದೆ ಎಂದರೆ ಸರಿಯಲ್ಲ.

(**ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು**)

(**ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು**)

ಓ ಹೇ ಕೇ ಸ ಇ

sd/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.,ರವರು ಕಡೂರು.